# ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಲಯ,

# ಬಳ್ಳಾರಿ

## ವಿಶೇಷ ಮೊಕದ್ದಮೆ ಸಂಖ್ಯೆಃ 785/2025

**ಪಿ.ಡಬ್ಲ್ಯೂಃ 2 (ಸಿಡಬ್ಲ್ಯೂಃ2 )**

| | | |
|---|---|---|
| **ಸಾಕ್ಷಿದಾರರ ಹೆಸರು** | **:** | **ಶ್ರೀ ಆರ್ ಅಶೋಕ್ ಕುಮಾರ್** |
| **ತಂದೆಯ ಹೆಸರು** | **:** | **ನಲ್ಲಣ್ಣ** |
| **ವಯಸ್ಸು** | **:** | **45 ವರ್ಷ** |
| **ಕೆಲಸ** | **:** | **ಎಸ್ ಡಿ ಎ, ತಾಲೂಕು ಕಚೇರಿ ಸಿರುಗುಪ್ಪ** |
| **ವಾಸ ಸ್ಥಳ** | **:** | **ಬಳ್ಳಾರಿ** |

**ಸಾಕ್ಷಿಯನ್ನು ದಿನಾಂಕ 26.03.2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

2009 ರಿಂದ 2025 ಜುಲೈ ರ ವರೆಗೆ ನಾನು ಬಳ್ಳಾರಿಯ ತಾಲೂಕು ಕಚೇರಿಯಲ್ಲಿ ಎಸ್ ಡಿ ಎ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಚಾಸಾ.3 ವೈದ್ಯನಾಥ ಗ್ರಾಮ ಲೆಕ್ಕಾಧಿಕಾರಿಯಾಗಿ ನಮ್ಮ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರು.

**2.** ದಿಃ9.5.2025 ರಂದು ಸಿ ಇ ಎನ್ ಪೊಲೀಸರು ತಹಶೀಲ್ದಾರ್ ರವರಿಗೆ ಕೋರಿಕೆ ಪತ್ರ ಸಲ್ಲಿಸಿದ್ದು ಅದರಂತೆ ತಹಶೀಲ್ದಾರ್ ರವರು ನನ್ನನ್ನು ಮತ್ತು ವೈದ್ಯನಾಥ ರವರನ್ನು ಸಿ ಇಎನ್ ಪೊಲೀಸ್ ಠಾಣೆಗೆ ಹೋಗಿ ಪಂಚನಾಮೆಗೆ ಸಹಕರಿಸಲು ಆದೇಶ ಮಾಡಿರುತ್ತಾರೆ. ಆದೇಶದ ಪ್ರತಿಯನ್ನು ನಿಪಿ.5 ಎಂದುಗುರುತಿಸಲಾಯಿತು.

**Spl.C.No.785/2025**
**P.W. 2 (C.W.2)**
**Date : 26.03.2026**

**3.** ನಾನು ಮತ್ತು ವೈದ್ಯನಾಥ ಮಃ1.15 ಗಂಟೆಗೆ ಠಾಣೆಗೆ ಹೋಗಿದ್ದೇವೆ. ಪಿಎಸ್ ಐ ವಲಿಬಾಷ ರವರು ದೂರನ್ನು ನೀಡಿದ್ದು ಬೆಳಗಲ್ ಕ್ರಾಸ್ ಹತ್ತಿರ ಅಕ್ರಮ ಗಾಂಜಾ ಸಾಗಾಟ ಮಾಡುತ್ತಿದ್ದ ಬಗ್ಗೆ ಮಾಹಿತಿ ಬಂದಿದ್ದು ಪಂಚರಾಗಿ ಭಾಗವಹಿಸಬೇಕು ಎಂದು ನಮಗೆ ತಿಳಿಸಿದರು. ಅದರಂತೆ ನಮಗೆ ನೋಟಿಸ್ ನ್ನು ಜಾರಿ ಮಾಡಿರುತ್ತಾರೆ. ಸದರಿ ನೋಟಿಸ್ ನ್ನು ನಿಪಿ.6 ಎಂದು ಸಾಕ್ಷಿಯ ಸಹಿಯನ್ನು ನಿ**ಪಿ.6 ಎ** ಎಂದು ಗುರುತಿಸಲಾಯಿತು.

**4.** ನಾನು , ಚಾಸಾ.3 , ಪಿಎಸ್ ಐ ವಲಿಬಾಷ , ಡಿವೈ ಎಸ್ ಪಿ ಮತ್ತು ಸಿಬ್ಬಂದಿಗಳು ಮಃ1.30 ಗಂಟೆಗೆ ಠಾಣೆಯನ್ನು ಬಿಟ್ಟು ಮಾಹಿತಿ ಬಂದ ಸ್ಥಳಕ್ಕೆ ಮಃ2.00 ರಿಂದ 2.15 ಗಂಟೆಗೆ ತಲುಪಿರುತ್ತೇವೆ ಮಾಹಿತಿ ಸ್ಥಳದಲ್ಲಿ ಅನಮಾನಾಸ್ಪದವಾಗಿ ಇಬ್ಬರು ವ್ಯಕ್ತಿಗಳು ಕಂಡು ಬಂದರು. ಅವರ ಕೈಯಲ್ಲಿ ಒಂದು ಬಿಳಿ ಚೀಲ ಇತ್ತು. ಪೊಲೀಸರು ಅವರನ್ನು ಹಿಡಿದುಕೊಂಡರು ಮತ್ತು ಅವರ ಹೆಸರು ವಿಳಾಸ ಕೇಳಲಾಗಿ ಅವರ ಹೆಸರು ತಿಪ್ಪಯ್ಯ ಮತ್ತು ಕೃಷ್ಣ ಎಂದು ತಿಳಿಸಿದರು. ಬ್ಯಾಗ್ ನ್ನು ಪರಿಶೀಲಿಸಿದಾಗ ಅದರಲ್ಲಿ ಹೂವು, ಎಲೆ ಮತ್ತು ಬೀಜ ಕಂಡು ಬಂತು. ಅದರಿಂದ ಘಾಟು ವಾಸನೆ ಬರುತ್ತಿತ್ತು. ಅದು ಗಾಂಜಾ ಎಂದು ಗೊತ್ತಾಯಿತು. ಪೊಲೀಸರು ಸದರಿ ವಸ್ತುವನ್ನು ಎಲ್ಲಿಂದ ತಂದಿರುತ್ತೀರಿ ಎಂದುಕೇಳಿರುತ್ತಾರೆ.

**5.** ಡಿವೈ ಎಸ್ ಪಿ ರವರು ಆರೋಪಿಗಳಿಂದ ದೊರತೆ ಚೀಲವನ್ನು ಪರಿಶೀಲಿಸಿ ತೂಕ ಮಾಡಿದ್ದು ಸದರಿ ವಸ್ತು 1 ಕೆಜಿ 115 ಗ್ರಾಂ ತೂಕ ಬಂತು. ನಂತರ ಒಯಿ ಬಟ್ಟೆ ಚೀಲದಲ್ಲಿ ಹಾಕಿ ಪ್ಯಾಕ್ ಮಾಡಿ ಸೀಲ್ ಮಾಡಿದರು. ಪುನಃ ತೂಕ ಮಾಡಿದಾಗ ಅದು 1 ಕೆಜಿ 215 ಗ್ರಾಂ ತೂಕ ಬಂತು. ಸ್ಥಳದಲ್ಲಿ ಪಂಚನೆಮ ಬರೆದಿರುತ್ತಾರೆ ಮತ್ತು ಫೋಟೋ ತೆಗೆದಿರುತ್ತಾರೆ. ಪಂಚನಾಮೆಯನ್ನು ಈಗಾಗಲೇ ನಿಪಿ. 2 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು **ನಿಪಿ.2(ಬಿ )** ಎಂದು ಗುರುತಿಸಲಾಯಿತು. ಫೋಟೋ ವನ್ನು ನಿಪಿ.3 ಎಂದು ಈಗಾಗಲೇ ಗುರುತಿಸಲಾಗಿದೆ.

**6.** ದಿಃ12.5.2025 ರಂದು ಪೋಲೀಸರು ಇನ್ವೆಂಟರಿ ಸಲುವಾಗಿ ನ್ಯಾಯಾಲಯಕ್ಕೆ ಕರೆಸಿದ್ದರು. ನ್ಯಾಯಾಧೀಶರ ಮುಂದೆ ಇನ್ವೆಂಟರಿ ಕ್ರಮ ಜರುಗಿಸಿ ಮಾದರಿಗಾಗಿ ತಲಾ 50 ಗ್ರಾಂ ಗಾಂಜಾವನ್ನು 2 ಪ್ಯಾಕೆಟ್ ನಲ್ಲಿ ತೆಗೆದುಕೊಳ್ಳಲಾಯಿತು. ನ್ಯಾಯಾಧೀಶರ ಸಮಕ್ಷಮದಲ್ಲಿ ಬರೆದ ಪಂಚನಾಮೆಗೆ ನಾನು ಸಹಿ ಮಾಡಿದ್ದೇನೆ. ಪಂಚನಾಮೆಯನ್ನು **ನಿಪಿ.7** ಎಂದು ಸಾಕ್ಷಿಯ ಸಹಿಯನ್ನು **ನಿಪಿ.7 ಎ** ಎಂದು ಗುರತಿಸಲಾಯಿತು. ಪಂಚನೆಮ ಕಾಲಕ್ಕೆ ಫೋಟೋ ತೆಗೆದಿರುತ್ತಾರೆ. ಫೋಟೋ ವನ್ನು **ನಿಪಿ.8** ಎಂದು ಗುರುತಿಸಲಾಯಿತು. ಮಾದರಿ ಗಾಂಜಾವನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು **ಎಂಒ 1** ಎಂದು ಗುರುತಿಸಲಾಯಿತು. ಎಂಒ 1 ಪ್ಯಾಕ್ ನ ಮೇಲೆ ನನ್ನ ಸಹಿ ಇರುವ ಚೀಟಿ ಕಂಡು ಬರುತ್ತದೆ. ಆರೋಪಿಗಳಾದ ಕೃಷ್ಣ ಮತ್ತು ತಿಪ್ಪಯ್ಯ ರವರನ್ನು ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ಗುರುತಿಸಿದ್ದಾರೆ.

**ಪಾಟೀ ಸವಾಲುಃ ಶ್ರೀಜಿ.ಎಂ.ಆರ್ಃ ವಕೀಲರು ಆರೋಪಿತರ ಪರಃ**

7. ಪಂಚನಾಗಿ ಹೋಗಬೇಕು ಎಂದು ನಮ್ಮ ಮೇಲಾಧಿಕಾರಿಗಳು ಲಿಖಿತ ಆದೇಶ ಮಾಡಿಲ್ಲ ಎನ್ನುವುದು ಸರಿಯಲ್ಲ. ಬೆಳಗಲ್ ರಸ್ತೆಯಲ್ಲಿ ಸಾಕಷ್ಟು ವಾಹನಗಳು ಓಡಾಡುತ್ತವೆ ಎನ್ನುವುದು ಸರಿ . ಸದರಿ ರಸ್ತೆಯಲ್ಲಿ ಬಹಳಷ್ಟು ಜನರು ಓಡಾಡುತ್ತಾರೆ ಎನ್ನುವುದು ಸರಿಯಲ್ಲ. ಡಿವೈ ಎಸ್ ಪಿ ರವರ ವಾಹನ ಸಂಖ್ಯೆಃ ಕೆಎ 02 ಜಿ 1694 ರಲ್ಲಿ ಸ್ಥಳಕ್ಕೆ ಹೋಗಿರುತ್ತೇವೆ. ಸದರಿ ಗಾಡಿಯಲ್ಲಿ ನಾನು , ಇನ್ನೊಬ್ಬ ಪಂಚ , ಡಿವೈ ಎಸ್ ಪಿ ರವರು ಲ್ಯಾಪಟಾಪ್ , ಪ್ರಿಂಟರ್, ತೂಕ ಮಾಡುವ ಯಂತ್ರ , ಬಿಳಿ ದಾರ, ಸೀಲ್ ನ್ನು ತೆಗೆದುಕೊಂಡು ಹೋಗಿರುತ್ತೇವೆ. ಬೇರೆ ಸಿಬ್ಬಂದಿಗಳು ಮೋಟಾರು ಸೈಕಲ್ ನಲ್ಲಿ ಬಂದಿರುತ್ತಾರೆ. ಚೀಲ ಆರೋಪಿ ತಿಪ್ಪಯ್ಯನ ಕೈಯಲ್ಲಿ ಇತ್ತು.

**Spl.C.No.785/2025**
**P.W. 2 (C.W.2)**
**Date : 26.03.2026**

**8.** ನಿಪಿ.3 ಫೋಟೋವನ್ನು ಪೊಲೀಸರು ತೆಗೆದಿದ್ದಾರೆ. ಫೋಟೋದಲ್ಲಿ ಚೀಲ ಮಿಷನ್ ನ ಮೇಲೆ ಕಂಡು ಬರುವುದಿಲ್ಲ ಎನ್ನುವುದು ಸರಿ . ನಾನು ಸ್ಥಳಕ್ಕೆ ಹೋಗಿಲ್ಲ ಎನ್ನುವುದು ಸರಿಯಲ್ಲ. ತಹಶೀಲ್ದಾರ್ ರವರ ಮಾತು ಕೇಳಿ ಮತ್ತು ಪೊಲೀಸರ ಮಾತು ಕೇಳಿ ಆರೋಪಿಗಳ ವಿರುದ್ದ ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು-ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ**

**ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

\

**ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಧೀಶರು,**
**ಬಳ್ಳಾರಿ.**